**ಪತ್ರಿಕಾ ಪ್ರಕಟಣೆಗಾಗಿ**

**ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ**

**ದಿನಾಂಕ: 19-12-2015**

## ಆಂದೋಲನ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 2015 ನ್ನು ಸ್ವಾಗತಿಸುತ್ತದೆ

'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಮಸೂದೆ 2015' ಕ್ಕೆ ಕರ್ನಾಟಕದ ರಾಜ್ಯಪಾಲರ ಅಂಕಿತ ಬಿದ್ದಿದೆ. ಇದರಿಂದಾಗಿ ಗ್ರಾಮ ಸ್ವರಾಜ್ಯಕ್ಕೆ ಮುನ್ನುಡಿ ಬರೆದ ರಾಜ್ಯ ಸರ್ಕಾರದ ಮಹತ್ವದ ನಿರ್ಧಾರಕ್ಕೆ ಅಧಿಕೃತ ಮುದ್ರೆ ಒತ್ತಿದಂತಾಗಿದೆ. ಈ ಕಾಯ್ದೆಯ ಮೂಲಕ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಬಲವಾಗಿ ನಂಬುವ ಭಾಗವಹಿಸುವಿಕೆಯ ಪ್ರಜಾಪ್ರಭುತ್ವ ಮತ್ತು ಮಕ್ಕಳು, ಮಹಿಳೆಯರು ಮತ್ತು ಎಲ್ಲಾ ದುರ್ಬಲ ವರ್ಗದವರ ಭಾಗವಹಿಸುವಿಕೆಯೊಂದಿಗೆ ಪ್ರಜಾಪ್ರಭುತ್ವದ ವಿಕೇಂದ್ರೀಕರಣದತ್ತ ಸರ್ಕಾರವು ದೊಡ್ಡ ಹೆಜ್ಜೆ ಇಟ್ಟಂತಾಗಿದೆ. ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನವು ಕರ್ನಾಟಕ ಸರ್ಕಾರ ಹಾಗು ಜನತೆಗೆ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಿರುವುದಕ್ಕಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತದೆ.

ಕರ್ನಾಟಕ ಸರ್ಕಾರವು ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ಸೂಚಿಸಲು ಶ್ರೀ ರಮೇಶ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಆಂದೋಲನದ ಸಂಚಾಲಕರಾದ ಶ್ರೀಮತಿ ನಂದನ ರೆಡ್ಡಿ ಹಾಗು ಎಲ್ಲಾ ಸದಸ್ಯರು ಸಮಗ್ರ ವರದಿ ಹಾಗು ಶಿಫಾರಸ್ಸುಗಳನ್ನು ಸೂಚಿಸುವುದರ ಮೂಲಕ ಪ್ರಜಾಪ್ರಭುತ್ವದ ನೆಲೆಯಲ್ಲಿ ವಿಕೇಂದ್ರೀಕರಣದ ಆಶಯಗಳಿಗೆ ಒತ್ತು ನೀಡಲು ತಮ್ಮನ್ನು ತೊಡಗಿಸಿಕೊಂಡರು. ಈ ಸಮಿತಿಯು ಇಡೀ ದೇಶಕ್ಕೆ ಮಾದರಿಯಾಗುವಂತಹ ಉತ್ತಮವಾದ ವರದಿಯನ್ನು ನೀಡಿದ್ದರು. ಈ ಸಂದರ್ಭದಲ್ಲಿ ಈ ಸಮಿತಿಯ ಸದಸ್ಯರ ಕೊಡುಗೆಯನ್ನು ಆಂದೋಲನ ಅಭಿನಂದಿಸುತ್ತದೆ.

ಆಂದೋಲನದ ವಕೀಲಿಯಲ್ಲಿ ಈ ಕಾಯ್ದೆಯು ಒಂದು ಮಹತ್ವದ ಮೈಲಿಗಲ್ಲಾಗಿರುತ್ತದೆ. ಭಾಗವಹಿಸುವಿಕೆಯ ಪ್ರಜಾಪ್ರಭುತ್ವ ಹಾಗೂ ರಾಜಕೀಯ ವಿಕೇಂದ್ರೀಕರಣದ ಆಶಯಕ್ಕೆ ಬದ್ಧರಾಗಿ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡುವ ನಿಟ್ಟನಲ್ಲಿ ಆಂದೋಲನವು ಕರ್ನಾಟಕ ರಾಜ್ಯದ ಗ್ರಾಮ ಪಂಚಾಯತ್ ಮತ್ತು ಗ್ರಾಮ ಸಭಾ ಸದಸ್ಯರ ಸಹಭಾಗಿತ್ವದಲ್ಲಿ 2007 ರಿಂದ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಾ ಬಂದಿದೆ. 2011ರಲ್ಲಿ ಉಡುಪಿ ಜಿಲ್ಲೆಯಲ್ಲಿ ಆಂದೋಲನವು ನಡೆಸಿದ ರಾಜ್ಯಮಟ್ಟದ ಬೃಹತ್ ಸಮಾವೇಶದಲ್ಲಿ ಸುಮಾರು 5000 ಪ್ರತಿನಿಧಿಗಳು ಭಾಗವಹಿಸಿ ಕರ್ನಾಟಕ ರಾಜ್ಯದಲ್ಲಿನ ಭಾಗವಹಿಸುವಿಕೆಯ ಪ್ರಜಾಪ್ರಭುತ್ವದ ಭವಿಷ್ಯದ ಬಗ್ಗೆ ಚರ್ಚೆ ನಡೆಸಿದರು. ಆ ಸಂದರ್ಭದಲ್ಲಿ ಮಂಡನೆಯಾದ 'ಉಡುಪಿ ನಿರ್ಣಯಗಳು-2011' ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತ ಆಲೋಚನೆಯ ಮೇಲೆ ಮಹತ್ತರವಾದ ಪರಿಣಾಮವನ್ನು ಬೀರಿತು. ಇದರ ಪರಿಣಾಮವಾಗಿ 'ಉಡುಪಿ ನಿರ್ಣಯಗಳು' ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 2015 ಕ್ಕೆ ನೀಡಿದ ಕೊಡುಗಯ ತಳಪಾಯವಾಗಿರುತ್ತದೆ. ತನ್ನೆಲ್ಲಾ ಈ ಹಿಂದಿನ ಹೋರಾಟದ, ಕಾರ್ಯವೈಖರಿಯ ಪ್ರತಿಫಲವಾಗಿ ರಾಜ್ಯ ಸರ್ಕಾರ ರಚಿಸಿದ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿಗಾಗಿ ರಚನೆಯಾದ ರಮೇಶ್ ಕುಮಾರ್ ಸಮಿತಿಯಲ್ಲಿ ಆಂದೋಲನದ ಸಂಚಾಲಕರಾದ ಶ್ರೀಮತಿ ನಂದನ ರೆಡ್ಡಿ ಯವರು ತೊಡಗಿಸಿಕೊಂಡು, ಒಂದು ಮಹತ್ತರವಾದ ಕೊಡುಗೆಯನ್ನು ನೀಡಿದರು.

ಈ ಕಾಯ್ದೆಯು ಗ್ರಾಮ ಸ್ವರಾಜ್ಯವನ್ನು ದೃಢೀಕರಿಸುವ ಒಂದು ಪರಿಣಾಮಕಾರಿಯಾದ ಹೆಜ್ಜೆಯಾಗಿರುತ್ತದೆ. ಇದು ಕರ್ನಾಟಕದ ಪಂಚಾಯತ್‌ಗಳಿಗೆ ಹಿಂದೆಂದಿಗಿಂತಲೂ ಹೆಚ್ಚು ಸಬಲ ಹಾಗೂ ಸಶಕ್ತಗೊಳ್ಳುವಿಕೆಗೆ ಪುಷ್ಟಿ ನೀಡುತ್ತದೆ. ಕಾಯ್ದೆಯ ಉದ್ದೇಶವನ್ನು ಸಾಧ್ಯಗೊಳಿಸುವಲ್ಲಿ ಗ್ರಾಮ ಸಭಾ ಸದಸ್ಯರ ಪಾತ್ರ ಗಮನಾರ್ಹವಾದದ್ದು. ವಿಕೇಂದ್ರೀಕರಣ, ಭಾಗವಹಿಸುವಿಕೆಯುಕ್ತ ಪ್ರಜಾಪ್ರಭುತ್ವ ಹಾಗು ನಮ್ಮ ಸಂವಿಧಾನಕ್ಕೆ ಅವರಿಗಿರುವ ಬದ್ಧತೆಯು

*ಸ್ಪೂರ್ತಿದಾತರು:*

**ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀ0ಯ 0ಯೋಜನಾ ಆ0ಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀ0ಯ ರಾ0ಯಭಾರಿಗಳು

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

*ಸಲಹಾ ಸಮಿತಿ ಸದಸ್ಯರು:*

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆ0ಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾ0ರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲ0ಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

*ಸಂಯೋಜನಾ ಸಮಿತಿ:*

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

*ಸಂಯೋಜಕರು:*

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು–560 017
ಫೋನ್: 080–25234270, 25234272, 25234611
ಇ–ಮೇಲ್: cwc@pobox.com
cwcblr@gmail.com
ವೆಬ್:
www.theconcernedforworkingchildren.org

ಈ ಕಾಯ್ದೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುತ್ತದೆ. ಕಾಯ್ದೆಯನ್ನು ಕಾರ್ಯರೂಪಕ್ಕೆ ತರಲು ಆಂದೋಲನವು ಸರ್ಕಾರಕ್ಕೆ ತನ್ನ ಬದ್ಧತೆ ಹಾಗು ಕಾಳಜಿಯನ್ನು ತೋರಿಸಲು ಕೇಳಿಕೊಳ್ಳುತ್ತದೆ.

ಭಾರತದ ಸಂವಿಧಾನದ ನೆಲೆಯಲ್ಲಿ, ಈ ಕಾಯ್ದೆಯು ಸ್ವಾವಲಂಬಿ ಸ್ಥಳೀಯ ಸರ್ಕಾರದ ವಕೀಲರಿಗೆ ಗೆಲುವನ್ನು ತಂದುಕೊಟ್ಟಿರುತ್ತದೆ. ಸ್ಥಳೀಯ ಸರ್ಕಾರದ ತಳಪಾಯ ಭದ್ರವಾಗಿದ್ದಾಗ ಹಾಗು ಗ್ರಾಮ ಸಭೆಗಳಿಗೆ ಅವರು ಉತ್ತರದಾಯಿಯಾದಾಗ ಮಾತ್ರ ಈ ಕಾಯ್ದೆಯ ಮುಖ್ಯ ಉದ್ದೇಶವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆಂದೋಲನವು ತ್ರಿಸ್ಥರ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರತಿನಿಧಿಗಳಲ್ಲಿ ಸಂಪೂರ್ಣ ಭರವಸೆಯನ್ನು ಹೊಂದಿದ್ದು, ಅವರು ಕಾಯ್ದೆಯ ಮೂಲ ತತ್ವಗಳನ್ನು ಅರ್ಥೈಸಿಕೊಂಡು ಭ್ರಷ್ಟಾಚಾರ ಮುಕ್ತ, ಜಾತ್ಯಾತೀತ ಮತ್ತು ಪ್ರಜಾಸತ್ತೀಯ ಸಮಾಜವಾದಿಗಳಾಗಿ, ಎಲ್ಲಾ ನಾಗರಿಕರ ಹಕ್ಕುಗಳನ್ನು ಗೌರವಿಸುವ ಹಾಗೂ ರಕ್ಷಿಸುವಂತಹ ಸುರಕ್ಷಿತ ವಾತಾವರಣದೊಂದಿಗೆ, ಜನಸ್ನೇಹಿ ಗ್ರಾಮ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆಂಬ ದೃಢವಿಶ್ವಾಸ ಆಂದೋಲನಕ್ಕಿದೆ. ಕರ್ನಾಟಕ ಸರ್ಕಾರದ ಮೇಲೆ ಇದೊಂದು ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ಈ ಕಾಯ್ದೆಯ ಮೂಲಕ ಕರ್ನಾಟಕ ರಾಜ್ಯವು ಇಡೀ ಭಾರತ ದೇಶಕ್ಕೆ ರಾಜಕೀಯ ವಿಕೇಂದ್ರೀಕರಣದ ಮಾದರಿಯಾಗಲೆಂದು ಆಂದೋಲನವು ಆಶಿಸುತ್ತದೆ.



ದಾಮೋದರ ಆಚಾರ್ಯ
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಾಲಯದ ಪರವಾಗಿ